<u>ದಿನಾಂಕ: 05.09.2024 ರಂದು ಸಾಕ್ಷಿಯನ್ನು ಕರೆಸಲಾಯಿತು ಮತ್ತು ಪ್ರಮಾಣ ವಚನ ಬೋಧಿಸಲಾಯಿತು.</u>

**<u>ಪಾಟೀ ಸವಾಲು ವಾದಿಗಳ ಪರ ಶ್ರೀಮತಿ ಎಂ ಎಂ ವಕೀಲರಿಂದಃ</u>**

ನಮ್ಮ ವಂಶದ ಮೂಲ ಪುರುಷ ಗೊಲ್ಲಳ್ಳಿ ಈರಜ್ಜ. ಗೊಲ್ಲಳ್ಳಿ ಈರಜ್ಜನಿಗೆ ಇಬ್ಬರು ಹೆಂಡತಿಯರು ಎಂದರೆ ನಿಜ. ಮೊದಲ ಹೆಂಡತಿ ಹೆಸರು ಲಕ್ಷ್ಮಕ್ಕ, 2 ನೇ ಹೆಂಡತಿ ಹೆಸರು ಲಕ್ಕಮ್ಮ ಎಂದರೆ ನಿಜ. 1 ನೇ ಹೆಂಡತಿ ಲಕ್ಷ್ಮಕ್ಕನಿಗೆ ಇಬ್ಬರು ಮಕ್ಕಳು. ಅವರ ಹೆಸರು ಈರಜ್ಜ ಮತ್ತು ಕೊರಮಜ್ಜ. ಈರಜ್ಜನಿಗೆ ಇಬ್ಬರು ಹೆಂಡತಿಯರು ಎಂದರೆ ನಿಜ. 1 ನೇ ಹೆಂಡತಿ ತಿಪ್ಪಮ್ಮ ಅವರಿಗೆ ನಷ್ಟ ಸಂತತಿ ಎಂದರೆ ನಿಜ. 2 ನೇ ಹೆಂಡತಿ ಕಣುಮಜ್ಜಿ ಎಂದರೆ ನಿಜ. ಸದರಿ ಕಣುಮಜ್ಜಿಗೆ ಒಬ್ಬನೇ ಮಗ ಪಲ್ಲಕ್ಕಪ್ಪ ಎಂದರೆ ನಿಜ. ಪಲ್ಲಕ್ಕಪ್ಪ ಪೌತಿಯಾಗಿದ್ದಾರೆ. ಸಾಕ್ಷಿ ಮುಂದುವರೆದು 2006 ರಲ್ಲಿ ಪೌತಿಯಾಗಿದ್ದಾರೆ ಎಂದು ನುಡಿಯುತ್ತಾರೆ. ಪಲ್ಲಕ್ಕಪ್ಪನಿಗೆ ಶಾರದಮ್ಮ ಎಂಬ ಹೆಂಡತಿ, ಶಶಿಧರ, ಗುಣಧರ, ಶ್ರೀಧರ ಎಂಬ ಮಕ್ಕಳು ಎಂದರೆ ನಿಜ. ಅವರು ಈ ದಾವೆಯ ವಾದಿಗಳು ಎಂದರೆ ನಿಜ. ಅವರು ನನ್ನ ಮೇಲೆ ಕೇಸ್ ಹಾಕಿದ್ದಾರೆ ಎಂದರೆ ನಿಜ.

ಗೊಲ್ಲಳ್ಳಿ ಈರಜ್ಜ ಈಗ ಜೀವಂತ ಇಲ್ಲ. ಅವರ 1 ನೇ ಹೆಂಡತಿಯ 2 ನೇ ಮಗ ಕೊರಮಜ್ಜ ಎಂದರೆ ನಿಜ. ಸದರಿ ಕೊರಮಜ್ಜ ಜೀವಂತ ಇಲ್ಲ. ಕೊರಮಜ್ಜನ ಹೆಂಡತಿ ಕರಿಯಮ್ಮ ಜೀವಂತ ಇಲ್ಲ. ಕರಿಯಮ್ಮ ಮತ್ತು ಕೊರಮಜ್ಜನಿಗೆ ನಷ್ಟ ಸಂತತಿ ಎಂದರೆ ನಿಜ. ಗೊಲ್ಲಳ್ಳಿ ಈರಪ್ಪನ 2 ನೇ ಹೆಂಡತಿ ಲಕ್ಕಮ್ಮನಿಗೆ ಒಬ್ಬನೇ ಮಗ ಕದುರಪ್ಪ ಎಂದರೆ ನಿಜ. ಸದರಿ ಕದುರಪ್ಪನಿಗೆ ಇಬ್ಬರು ಹೆಂಡತಿಯರು ಅವರ ಹೆಸರು ರಂಗಮ್ಮ ಮತ್ತು ಹನುಮಕ್ಕ. ನಾವು ರಂಗಮ್ಮನ ಮೊಮ್ಮಕ್ಕಳು. ಕೆ ಈರಪ್ಪ ಮತ್ತು ಕರಿಯುಪ್ಪ 2 ನೇ ಹೆಂಡತಿ ಹನುಮಕ್ಕನ ಮಕ್ಕಳು. ನನ್ನ ತಂದೆ ರಂಗಮ್ಮನ ಮಗ.

ಮೂಲ ಪುರುಷ ಗೊಲ್ಲಳ್ಳಿ ಈರಜ್ಜನಿಗೆ ಸರ್ವೆ ನಂ.11 ಒಂದೇ ಪಿತ್ರಾರ್ಜಿತ ಆಸ್ತಿ ಇತ್ತು ಎಂದರೆ ನಿಜ. ಸರ್ವೆ ನಂ.11 ಒಟ್ಟು 24 ಎಕರೆ 28 ಗುಂಟೆ ಇತ್ತು. ನನ್ನ ತಾತಂದಿರಾದ ಈರಪ್ಪ, ಕೊರಮಪ್ಪ ಮತ್ತು ಕದುರುಪ್ಪ ಇವರು ಜುಬಾನಿ ಪಾಲುವಿಭಾಗ ಮಾಡಿಕೊಂಡರು ಎಂದರೆ ನಿಜ.

ಆ ಜುಬಾನಿ ಪಾಲುವಿಭಾಗದಂತೆ ಪ್ರತಿಯೊಬ್ಬರಿಗೂ 8 ಎಕರೆ 8 ಗುಂಟೆ ಬಂತು ಎಂದರೆ ನಿಜ.

10 ಗುಂಟೆಜಮೀನು ನ್ಯಾಷನಲ್ ಹೈವೇ ಆಥಾರಿಟಿಯವರು ಪಡೆದ ನಂತರ ಅವು ಪೋಡಾಗಿದ್ದು ಸರ್ವೆ ನಂ.11/1 ಕೊರಮ್ಮಪ್ಪನಿಗೆ, ಸರ್ವೆ ನಂ.11/2 ಈರಪ್ಪನಿಗೆ, ಸರ್ವೆ ನಂ.11/3 ಕದುರಪ್ಪನಿಗೆ ಹೋಗಿದೆ ಎಂದರೆ ನಿಜ. ಪೋಡಾದ ನಂತರ ತಲಾ 7 ಎಕರೆ 36 ಗುಂಟೆ ಉಳಿದುಕೊಂಡಿದೆ ಎಂದರೆ ನಿಜ.

ಸರ್ವೆ ನಂ.11/1 ನ್ನು ಕೊರಮಪ್ಪ ತನ್ನ ಅಣ್ಣನ ಮಗ ಈರಪ್ಪನ ಮಗ ಪಲ್ಲೆಕಪ್ಪನಿಗೆ ದಿಃ10.03.1967 ರಂದು ವಿಲ್ ಬರೆದಿದ್ದಾರೆ ಎಂದರೆ ನಿಜ. ಕೊರಮಪ್ಪ ಜೀವಂತ ಇರುವವರೆಗೆ ಅವರು ಅನುಭವಿಸಿಕೊಂಡು ಬಂದಿದ್ದು ಅವರ ನಂತರ ಪಲ್ಲೆಕಪ್ಪ ಅನುಭವಿಸಿಕೊಂಡು ಬಂದಿದ್ದಾರೆ ಎಂದರೆ ನಿಜ. ಸದರಿ ವಿಲ್ ನಾಮೆಗೆ ನಾನೇ ಸಾಕ್ಷಿಯಾಗಿ ಸಹಿ ಮಾಡಿದ್ದೇನೆ ಎಂದರೆ ನಿಜ. ದಾವಾ ಐಟಂ ನಂ.2 ನೇ ಆಸ್ತಿಯನ್ನು ಜುಬಾನಿ ಪಾಲುವಿಭಾಗ ಮಾಡಿಕೊಂಡ ನಂತರ ಅದನ್ನು ಕೊಂಡುಕೊಂಡರು ಎಂದರೆ ನಿಜ. ಸಾಕ್ಷಿ ನಾನೇ ಮಾಡುತ್ತಿದ್ದೆವು ಎಂದು ನುಡಿಯುತ್ತಾರೆ. ಕೊರಮಪ್ಪನವರು ಐಟಂ ನಂ.2 ರ ಆಸ್ತಿ ಬಗ್ಗೆ ಯಾವುದೇ ವಿಲ್ ನಾವೆಯ ಮೂಲಕ ಹಸ್ತಾಂತರ ಮಾಡಿರುವುದಿಲ್ಲ. ಆ ಆಸ್ತಿಯಲ್ಲಿ ವಾದಿಗಳಿಗೂ ಸಹ ಹಕ್ಕು ಇದೆ ಎಂದರೆ ನಿಜ. ಸರ್ವೆ ನಂ.11/3 ನ್ನು ಜುಬಾನಿ ಪಾರಿಖತ್ ಮಾಡಿಕೊಂಡ ನಂತರ ನಾವು ಕೂಡ ಹಲವಾರು ಜಮೀನುಗಳನ್ನು ಕೊಂಡುಕೊಂಡಿದ್ದೇವೆ ಎಂದರೆ ನಿಜ. ಈರಪ್ಪನಿಗೆ ನಷ್ಟ ಸಂತತಿ ಎಂದರೆ ನಿಜ.

**<u>ಪಾಟೀ ಸವಾಲು ಶ್ರೀ ಬಿ ಎನ್ ಟಿ ವಕೀಲರಿಂದಃ</u>**

ದಾವಾ ಐಟಂ ನಂ.2 ರ ಆಸ್ತಿಯನ್ನು ಗೊಲ್ಲಳ್ಳಿ ಈರಜ್ಜನ ಮಗ ಕೊರಮಪ್ಪ ಕೊಂಡುಕೊಂಡಿದ್ದರು ಎಂದರೆ ನಿಜ. ಅದು ಅವರ ಸ್ವಯಾರ್ಜಿತ ಆಸ್ತಿ ಎಂದರೆ ನಿಜ. ಅವರಿಗೆ ರತ್ನಮ್ಮ ಎಂಬ ಮಗಳು ಇದ್ದು ಅವರು ತೀರಿಕೊಂಡಿದ್ದು ನಂತರ ನಾನೇ ನೋಡಿಕೊಂಡೆ ಎಂದು ಹೇಳುತ್ತಾರೆ. ಕೊರಮಪ್ಪ ತೀರಿಕೊಂಡಾಗ ಕರಿಯಮ್ಮ ಜೀವಂತ ಇದ್ದಾನೆ ಎಂದರೆ ನಿಜ .

ಕೊರಮಪ್ಪ ತೀರಿಕೊಂಡ ನಂತರ ಆತನ ಹೆಂಡತಿ ಕರಿಯಮ್ಮ ಅನುಭವಿಸುತ್ತಿದ್ದಳು ಎಂದರೆ ಸರಿಯಲ್ಲ. ನನ್ನ ಮುಖ್ಯ ವಿಚಾರಣೆಯ ಪ್ರಮಾಣ ಪತ್ರದಲ್ಲಿ ಕರಿಯಮ್ಮನ ಪೌತಿ ತರುವಾಯ ಪಲ್ಲೆಕ್ಕಪ್ಪ ಸ್ವಾದೀನದಲ್ಲಿ ಇದ್ದರು ಎಂದು ಬರೆಸಿದ್ದೇನೆ ಎಂದರೆ ನಿಜ. ದಾವಾ ಐಟಂ ನಂ.1 ವಿಭಾಗದಲ್ಲಿ ಕೊರಮಪ್ಪನ ಭಾಗಕ್ಕೆ ಹೋಗಿತ್ತು ಎಂದರೆ ನಿಜ. ಕೊರಮಪ್ಪನೇ ಆ ಜಮೀನು ಅನುಭವಿಸಿಕೊಂಡು ಬರುತ್ತಿದ್ದರು ಎಂದರೆ ನಿಜ. ಕೊರಮಪ್ಪನವರು ಅವರ ದುಡಿಮೆಯಿಂದ ಸರ್ವೆ ನಂ.3/2 ನ್ನು ಖರೀದಿ ಮಾಡಿದ್ದರು ಎಂದರೆ ನಿಜ. ಆತನ ಜೀವಿತ ಕಾಲದಲ್ಲಿ ಕೊರಮಪ್ಪ ಮತ್ತು ಅವರ ಹೆಂಡತಿ ಕರಿಯಮ್ಮ ಅನುಭವಿಸುತ್ತಿದ್ದರು ಎಂದರೆ ನಿಜ. ಸಾಕ್ಷಿ ಅವರು ಏನು ಮಾಡಿ ಹೋಗಿಲ್ಲ ಎಂದು ಹೇಳುತ್ತಾರೆ. ಕೊರಮಪ್ಪ ಮೃತ ಪಟ್ಟ ನಂತರ ಆತನ ಹೆಂಡತಿ ಬೇಸಾಯ ಮಾಡಿಕೊಂಡು ಹೋಗುತ್ತಿದ್ದರು ಎಂದರೆ ಸರಿಯಲ್ಲ ಸಾಕ್ಷಿ ಮುಂದುವರೆದು ನಾನೇ ವ್ಯವಸಾಯ ಮಾಡಿಕೊಂಡು ಹೋಗುತ್ತಿದ್ದೆ ಎಂದು ನುಡಿಯುತ್ತಾರೆ. ಸರ್ವೆ ನಂ.11/3 ಕದುರಪ್ಪನ ಭಾಗಕ್ಕೆ ಹೋಗಿತ್ತು ಎಂದರೆ ನಿಜ. ಸಾಕ್ಷಿ ಕದುರಪ್ಪ ನನ್ನ ತಂದೆ ಎಂದು ಹೇಳುತ್ತಾರೆ. ನನ್ನ ತಾತ ಕದುರಪ್ಪನಿಗೆ ಮೂರು ಜನ ಮಕ್ಕಳು ಎಂದರೆ ನಿಜ. ಅವರ ಹೆಸರು ಕದುರುಪ್ಪ , ವೀರಪ್ಪ, ಕರಿಯಪ್ಪ. ಸರ್ವೆ ನಂ.11/3 ರ 7 ಎಕರೆ 3 ಗುಂಟೆಯನ್ನು ತಿಮ್ಮಪ್ಪ, ವೀರಪ್ಪ, ಕರಿಯಪ್ಪ ಅನುಭವಿಸಿಕೊಂಡು ಬರುತ್ತಿದ್ದರು ಎಂದರೆ ಸರಿಯಲ್ಲ. ಸಾಕ್ಷಿ ಸರ್ವೆ ನಂ.11/3 ರ ಪಹಣಿ ಸತ್ಯಪ್ಪ, ವೀರಪ್ಪ ಕರಿಯಪ್ಪನ ಹೆಸರಿಗೆ ಜಂಟಿ ಇದೆ ಎಂದು ನುಡಿಯುತ್ತಾರೆ. 1994 ರಿಂದ ಜಂಟಿ ಇದೆ.

ಸರ್ವೆ ನಂ.11/3 ರನ್ನು ನಾನು, ವೀರಪ್ಪ ಕರಿಯಪ್ಪನವರು ಬಾಯಿ ಮಾತಿನಲ್ಲಿ ವಿಭಾಗ ಮಾಡಿಕೊಂಡೆವು ಎಂದರೆ ಸರಿಯಲ್ಲ. ಆ ಸಮಯದಲ್ಲಿ ವೀರಪ್ಪನಿಗೆ 2 ಎಕರೆ 20 ಗುಂಟೆ ಜಮೀನು, ನನಗೆ 2 ಎಕರೆ 20 ಗುಂಟೆ ಮತ್ತು ಕರಿಯಪ್ಪನಿಗೆ 2 ಎಕರೆ ಬಂತು ಎಂದರೆ ಸರಿಯಲ್ಲ. ಸರ್ವೆ ನಂ.11/3 ರ ಪೂರ್ವಕ್ಕೆ ರಾಷ್ಟ್ರೀಯ ಹೆದ್ದಾರಿ ಬರುತ್ತದೆ ಎಂದರೆ ಸಾಕ್ಷಿ ಸೂರ್ಯ ಹುಟ್ಟುವ (ಮೂಡಣ) ಕಡೆ ರಸ್ತೆ, ಪಶ್ಚಿಮಕ್ಕೆ (ಪಡುವಣ) ಕರಿಯಣ್ಣ ಮತ್ತು ಕೆ

ವೀರಪ್ಪನ ಜಮೀನು, ಉತ್ತರಕ್ಕೆ (ಬಡಗಣ) ಶಾರದಮ್ಮನವರ ಜಮೀನು, ದಕ್ಷಿಣಕ್ಕೆ (ತೆಂಕಣ) ಈರಮ್ಮನ ಜಮೀನು ಇರುತ್ತದೆ ಎಂದು ಹೇಳುತ್ತಾರೆ . ಸರ್ವೆ ನಂ.11/3 ರಲ್ಲಿ ಪೂರ್ಣ ಜಮೀನು ನನ್ನದೇ ಎಂದು ಕೇಳಿರುತ್ತೇನೆ. ಹಾಗೆಂದು ನಾನು ನನ್ನ ತಕರಾರಿನಲ್ಲಿ ತಿಳಿಸಿರುತ್ತೇನೆ. ಕೆ ವಿ ವೀರಣ್ಣ ನವರು ಶಿಕ್ಷಕರಾಗಿದ್ದರು. ಅವರ ಸಹಿ ನೋಡಿದರೆ ನಾನು ಗುರುತಿಸಬಲ್ಲೆ. ಸಾಕ್ಷಿಗೆ ನಿಡಿ-4, ನಿಡಿ-5 ನ್ನು ತೋರಿಸಿ ಇದು ವೀರಣ್ಣನವರ ಸಹಿಯಾ ಎಂದು ಕೇಳಿದ ಪ್ರಶ್ನೆಗೆ ಸಾಕ್ಷಿ ಅದು ವೀರಣ್ಣನ ಸಹಿ ಅಲ್ಲ ಎಂದು ಹೇಳುತ್ತಾರೆ. ನಿಡಿ-5 ರಲ್ಲಿ ಕೆ ವೀರಪ್ಪ ಎಂದು ಪೋಟೋ ಹಾಕಿದ ವ್ಯಕ್ತಿಯು ವೀರಪ್ಪನೇ ಹೌದು ಆದರೆ ಸಹಿ ಅವರದು ಆಗಿರುವುದಿಲ್ಲ ಎಂದು ನುಡಿಯುತ್ತಾರೆ.

ಸರ್ವೆ ನಂ.104/1 ಬಿ ಆಸ್ತಿಯನ್ನು ಮೃತ 1 ನೇ ಪ್ರತಿವಾದಿಯೊಂದಿಗೆ ನಾವೆಲ್ಲರೂ ಒಟ್ಟಿಗೆ ಇದ್ದಾಗ ಖರೀದಿ ಮಾಡಿದ್ದಾಗಿರುತ್ತದೆ. ಸರ್ವೆ ನಂ.112/ 1 ಎ, 112/1 ಬಿ ಆಸ್ತಿಯನ್ನು ಮೃತ 1 ನೇ ಪ್ರತಿವಾದಿಯವರು ಒಟ್ಟಿಗೆ ಇದ್ದಾಗ ಅವರ ಹೆಸರಿನಲ್ಲಿ ಖರೀದಿ ಮಾಡಲಾಗಿರುತ್ತದೆ ಎಂದರೆ ನಿಜ. ಪ್ರತಿವಾದ ಪತ್ರದಲ್ಲಿರುವ ವೀರಪ್ಪನ ಎನ್ನುವ ಹೆಸರಿನ ಸಹಿ ವೀರಪ್ಪನದಾಗಿರುವುದಿಲ್ಲ ಈ ಪ್ರಕರಣ ಸಲ್ಲಿಸುವಾಗ ವೀರಪ್ಪನವರು ಬದುಕಿರುತ್ತಾರೆ ಎಂದರೆ ನಿಜ. ವೀರಪ್ಪನವರು ಹೈಸ್ಕೂಲ್ ಶಿಕ್ಷಕರಾಗಿದ್ದರು ಅವರಿಗೆ ಸಂಬಳ ಬರುತ್ತಿತ್ತು ಎಂದರೆ ನಿಜ. ಅವರಿಗೆ ಮಕ್ಕಳು ಇರಲಿಲ್ಲ ಎಂದರೆ ಸರಿ. ಸಾಕ್ಷಿ ಮುಂದುವರೆದು ವೈ. ಕೆ ಚಂದ್ರಪ್ಪ ಅಂದರೆ 12 ನೇ ಪ್ರತಿವಾದಿಯನ್ನು ಸಾಕಿಕೊಂಡಿದ್ದರು ಎಂದು ಹೇಳುತ್ತಾರೆ. ವೈ. ಕೆ ಚಂದ್ರಪ್ಪ ಮೃತ ಪಟ್ಟಿರುತ್ತಾರೆ. ವೈ ಕೆ ಚಂದ್ರಪ್ಪನವರು ಒಟ್ಟು ಮೂರು ಮದುವೆಯಾಗಿದ್ದರು ಎಂದರೆ ನನಗೆ ಗೊತ್ತಿಲ್ಲ. ಅವರಿಗೆ ಮಕ್ಕಳು ಇದ್ದಾರೆ ಎಂದರೆ ನನಗೆ ಗೊತ್ತಿಲ್ಲ. ನನಗೆ ತಿಪ್ಪೀರಮ್ಮ ಎಂಬ ತಂಗಿ ಇರುತ್ತಾರೆ ಎಂದರೆ ನಿಜ. ನನ್ನ ತಂಗಿ ತಿಪ್ಪೀರಮ್ಮ ಇರುವ ವಿಚಾರವನ್ನು ನಮ್ಮ ವಕೀಲರಿಗೆ ತಿಳಿಸಿಲ್ಲ.

ಕರಿಯಪ್ಪ ಬಿನ್ ಕದುರುಪ್ಪನಿಗೆ 7 ಜನ ಮಕ್ಕಳು ಎಂದರೆ ನಿಜ. ಅವರ ಹೆಸರು ಲಕ್ಷ್ಮಿದೇವಿ, ಹೊನ್ನಮ್ಮ, ರತ್ನಮ್ಮ, ಹೊನ್ನಪ್ಪ , ಕುಮಾರ ಸ್ವಾಮಿ, ವಿಶ್ವೇಶ್ವರಯ್ಯ ಮತ್ತು ಲೋಕೇಶ್. ನಾನು

ತಕರಾರು ಸಲ್ಲಿಸುವ ಸಮಯದಲ್ಲಿ ನ್ಯಾಯಾಲಯಕ್ಕೆ ನಾನು ತಿಳಿಸಿರುತ್ತೇನೆ. ವಿಶ್ವೇಶ್ವರಯ್ಯ , ಲೋಕೇಶ, ಹೊನ್ನಮ್ಮ, ಲಕ್ಷ್ಮಿದೇವಿ, ರತ್ನಮ್ಮ ಜೀವಂತ ಇದ್ದಾರೆ. ನೀವು ಹಿಂದೆ ಸಾಕ್ಷಿಗೆ ಬರುವ ಮೊದಲು ಈ ಪ್ರಕರಣ ನಿಮ್ಮ ವಕೀಲರ ಮೂಲಕ ತಕರಾರು ಸಲ್ಲಿಸಿಲ್ಲ ಎಂದರೆ ಸಾಕ್ಷಿ ನನಗೆ ಮೊದಲು ಗೊತ್ತಿಲ್ಲ. ರಾಮಣ್ಣ ಎನ್ನುವವರು ನಂತರ ಸರ್ವೆ ನಂ.11/3 ರ ಕುರಿತು ಕೇಸ್ ಹಾಕಿದ ವಿಚಾರ ಹೇಳಿದ ನಂತರ ನಾನು ಬಂದು ತಕರಾರು ಸಲ್ಲಿಸಿದ್ದೇನೆ ಎಂದು ನುಡಿಯುತ್ತಾರೆ.

ಸರ್ವೆ ನಂ.112/1 ಎ, 112/1 ಬಿ ಯನ್ನು 1975 ರಲ್ಲಿ ರಂಗಚಾರಿ ಹೆಂಡತಿ ಸಾಕಮ್ಮ, ತಿಪ್ಪಮ್ಮ ರವರಿಂದ ಖರೀದಿ ಮಾಡಿರುತ್ತೇವೆ. ಸರ್ವೆ ನಂ.104/ಬಿ ನ್ನು ನನ್ನ ಚಿಕ್ಕಪ್ಪ 1 ನೇ ಪ್ರತಿವಾದಿಯ ಹೆಸರಿಗೆ ನಾವು ಒಟ್ಟಿಗೆ ಇದ್ದಾಗ ಓಬಣ್ಣನಿಂದ ಖರೀದಿ ಮಾಡಿರುತ್ತೇವೆ. ಕ್ರಯ ಪತ್ರಕ್ಕೆ ನಾವು ಸಹಿ ಮಾಡಿಲ್ಲ. ನನ್ನ ಚಿಕ್ಕಪ್ಪ ಕೆ ವೀರಪ್ಪ ಸಹಿ ಮಾಡಿದ್ದಾರೆ. ನಿಡಿ-6, 7 ರ 2 ನೇ ಪುಟದಲ್ಲಿರುವ ಸಹಿ ಕೆ ವೀರಪ್ಪನವರ ಸಹಿ ಎಂದರೆ ಸಾಕ್ಷಿ ಅವರ ಸಹಿ ಅಲ್ಲ ಎಂದು ಕಾಣಿಸುತ್ತದೆ ಎಂದು ನುಡಿಯುತ್ತಾರೆ.

ಸರ್ವೆ ನಂ.104/1 ಬಿ , 112/1 ಎ, 112/1 ಬಿ ರ ಪಹಣಿಯು 1 ನೇ ಪ್ರತಿವಾದಿ ಹೆಸರಿಗೆ ಇರುತ್ತದೆ. ಈ ಜಮೀನುಗಳ ಪಹಣಿ ಯಾರ ಹೆಸರಿನಲ್ಲಿ ಇದೆ ಎಂದು ನಾನು ತಿಳಿದುಕೊಂಡಿಲ್ಲ. ಅವರು ಏನೇನೋ ಮಾಡಿಕೊಂಡಿದ್ದಾರೆ ಎಂದು ನುಡಿಯುತ್ತಾರೆ. ಸರ್ವೆ ನಂ.11/3 ರ ಪಹಣಿ ಕೆ ವೀರಪ್ಪ ಮತ್ತು ಕರಿಯಪ್ಪನ ಹೆಸರಿಗೆ ಜಂಟಿ ಇದೆ ಎಂದರೆ ನಿಜ. ಸರ್ವೆ ನಂ.11/3 ನನ್ನ ಹೆಸರಿಗೆ ಇದೆ ಎಂದು ತೋರಿಸಲು ದಾಖಲೆ ಇದೆ. ಸರ್ವೆ ನಂ.11/3 ವಿಭಾಗವಾಗಿದ್ದು ಅದರಲ್ಲಿ ವೀರಪ್ಪನಿಗೆ ಬಂದ ಜಮೀನಿಗೆ ಪೂರ್ವಕ್ಕೆ ರಸ್ತೆ, ಪಶ್ಚಿಮಕ್ಕೆ ಕರಿಯಪ್ಪ, ಉತ್ತರಕ್ಕೆ ಶಾರದಮ್ಮ, ದಕ್ಷಿಣಕ್ಕೆ ನನ್ನದೇ ಜಮೀನು ಇತ್ತು ಎಂದರೆ ಸರಿಯಲ್ಲ. ನಾವು ಬಾಯಿ ಮಾತಿನ ಮೂಲಕ ವಿಭಾಗ ಮಾಡಿಕೊಂಡಿದ್ದರೂ ಸಹ ಭಾಗ ಮಾಡಿಕೊಂಡಿಲ್ಲ ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಸರ್ವೆ ನಂ.11/3 ಈಗಾಗಲೇ ವಿಭಾಗವಾಗಿದ್ದು ಅದರಲ್ಲಿ ನನಗೆ ಯಾವುದೇ ಭಾಗ ಕೊಡುವ ಅವಶ್ಯಕತೆ ಇಲ್ಲ ಎಂದರೆ ಸರಿಯಲ್ಲ. ಸರ್ವೆ ನಂ.104/1 ಬಿ , 112/1 ಎ, 112/1 1 ನೇ ಪ್ರತಿವಾದಿಯ ಸ್ವಯಾರ್ಜಿತ ಆಸ್ತಿ ಎಂದರೆ ಸರಿಯಲ್ಲ. ಆ ಆಸ್ತಿಯನ್ನು ವಿಲ್ ನಾಮೆ ಬರೆಯಲಾಗಿದೆ ಎಂದರೆ ಸರಿಯಲ್ಲ. ಸರ್ವೆ ನಂ.11/1 ರಲ್ಲಿ ನನಗೆ ಯಾವುದೇ ಹಕ್ಕು ಇರುವುದಿಲ್ಲ ಎಂದರೆ ಸರಿಯಲ್ಲ. ನಾನು ವಾದಿಗಳ ಮಾತು ಕೇಳಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಪ್ರತಿವಾದ ಪತ್ರದಲ್ಲಿ ತೋರಿಸಿದ ಆಸ್ತಿಗಳಿಗೆ ನಮಗೆಯಾವುದೇ ಹಕ್ಕು ಇಲ್ಲ ಎಂದರೆ ಸರಿಯಲ್ಲ. ಸರ್ವೆ ನಂ.3 ರಲ್ಲಿ 6 ಎಕರೆ 3 ಗುಂಟೆಯನ್ನು 1 ನೇ ಪ್ರತಿವಾದಿಗೆ ಕರಿಯಮ್ಮ ವಿಲ್ ಮಾಡಿದ್ದಾರೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯು ಹೇಳಿದ ಹೇಳಿಕೆಯನ್ನು ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಿಸಲಾಯಿತು )

ಓ ಹೇ ಕೇ ಸರಿ ಇದೆ

ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆ ಎಂ ಎಫ್ ಸಿ , ಹಿರಿಯೂರು